ಶ್ರೀಮತಿ ಸುಮಾ ವಸಂತ್.—ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅವರುಗಳಿಗೆ ಟೈಲರಿಂಗ್ ಕೊಡುವುದಕ್ಕೆ ಬಟ್ಟೆ ಹೊಲಿಗೆ ಯಂತ್ರವನ್ನು ಮಾತ್ರ ಕೊಟ್ಟು ಬಟ್ಟೆ ಹೊಲೆಯುವುದಕ್ಕೆ ಟೈಲರಿಂಗ್ ಕೊಡುತ್ತಾರೆ. ನಂತರ ಇವರಿಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಬಿದಿರನ್ನು ಸಪ್ಲೈ ಮಾಡುವುದಿಲ್ಲ. ಇದಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ? ಪರಿಶಿಷ್ಟ ಜಾತಿ ಮತ್ತು ಪಂಡಗಳ ಅಭಿವೃದ್ಧಿಯ ಬಗ್ಗೆ ವಿಶೇಷವಾಗಿ ಅವರಿಗೆ ಸಹಾಯಧನ ಮತ್ತು ಬೀಜ ಧನ ಕೊಡುವಂತಹ ಸಾಧ್ಯತೆ ಇದೆಯೇ ಎಂದು ತಿಳಿಸಬೇಕು.

ಶ್ರೀ ಜಿ. ಬಸವಣ್ಣಪ್ಪ.—ಇದರ ಬಗ್ಗೆ ನಿಗಮ ಹೊಸದಾಗಿ ಒಂದು ಕಾರ್ಯಕ್ರಮವನ್ನು ರೂಪಿಸಿದೆ. ಅದಕ್ಕೆ ೭೭–೭೮ರಲ್ಲಿ ೧.೨೫.೦೦೦ ಸಾವಿರ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೇವೆ. ಈ ಕಾರ್ಯಕ್ರಮ ಇನ್ನೂ ಕಾನೂನು ಆಗಿ ಆ ಮೂಲಕ ಜಾರಿಗೆ ಬಂದಿಲ್ಲ. ಇದರ ಉದ್ದೇಶ to impart training for women and youths ಇನ್ನು House keeping, nursing training ಇದರ ಬಗ್ಗೆ ಹೇಳುವುದಾದರೆ ಹೆಣ್ಣು ಮಕ್ಕಳು ಮುಂದೆ ಬರುವುದಕ್ಕೆ ಹೆಚ್ಚು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಆದಷ್ಟು ಬೇಗ ಈ ಕಾರ್ಯಕ್ರಮ ಜಾರಿಗೆ ಬರುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ದುರ್ಬಲ ವರ್ಗದವರಿಗೆ ಬಾವಿಗಳನ್ನು ತೋಡುವ ಕಾರ್ಯಕ್ರಮ ಇದೆ ಎಂದು ಹೇಳಿದ್ದಾರೆ. ಕೋಲಾರ ಮತ್ತು ಬೆಂಗಳೂರು ಜಿಲ್ಲೆಯನ್ನು ಡಾರ್ಕ್ ಮತ್ತು ಗ್ರೇ ಏರಿಯಾ ಎಂದು ಪರಿಗಣಿಸಿ ಕಾರ್ಪೊರೇಷನ್‌ನವರು ಪರ್ಮಿಷನ್ ಕೊಡುತ್ತಿಲ್ಲ. ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಡಾರ್ಕ್ ಮತ್ತು ಗ್ರೇ ಏರಿಯಾ ಎಂದು ಡಿಕ್ಲೇರ್ ಮಾಡಿರುವ ಪ್ರದೇಶದಲ್ಲಿ, ಗಂಗಾ ಕಲ್ಯಾಣ ಯೋಜನೆಯನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆದೇ ರೀತಿ ನಮ್ಮ ಕಾರ್ಪೊರೇಷನ್‌ನವರು ರೂಪಿಸಿರುವ ಈ ಸ್ಕೀಮ್ ಡಾರ್ಕ್ ಅಂಡ್ ಗ್ರೇ, ಏರಿಯಾ, ಇದಕ್ಕೆ ದಯವಿಟ್ಟು ಎಕ್ಸೆಂಪ್‌ಷನ್ ಕೊಟ್ಟರೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಅನುಕೂಲವಾಗುತ್ತದೆ. ಈ ಬಗ್ಗೆ ಮಾನ್ಯ ಸಚಿವರು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಇದರ ಬಗ್ಗೆ ಗಮನ ಹರಿಸಿ ಇದನ್ನು ಪರಿಶೀಲನೆ ಮಾಡುತ್ತೇನೆ.

ಮೈಸೂರು ಚಾಮುಂಡಿ ಬೆಟ್ಟದ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿರುವ ನೌಕರರ ಬಗ್ಗೆ

೧೫೪೬. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣ ರಾಜ).—ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಚಾಮುಂಡಿ ಬೆಟ್ಟದ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು, ಈ ಪೈಕಿ – ಹಂಗಾಮಿ ಎಷ್ಟು ? ಖಾಯಂ ಎಷ್ಟು ?

ಆ) ಸದರೀ ದೇವಸ್ಥಾನದಲ್ಲಿ ಹಂಗಾಮಿ ಮತ್ತು ಖಾಯಂ ನೌಕರರ ವೇತನ ಶ್ರೇಣಿ ಎಷ್ಟು ?

ಇ) ಚಾಮುಂಡಿ ಬೆಟ್ಟದಲ್ಲಿ ಪ್ರತಿ ವರ್ಷವು ಸಾರ್ವಜನಿಕರಿಂದ ಬರುತ್ತಿರುವ ಆದಾಯವೆಷ್ಟು?

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು).—

ಅ) ೯೫ ನೌಕರರು.

೨ ಸರ್ಕಾರಿ ನೌಕರರು.

೯೩ ಪೂರ್ಣಾವಧಿ ಹಂಗಾಮಿ ನೌಕರರು.

೧. ದೇವಸ್ಥಾನದ ಪಾಯಂ ನೌಕರರ ವೇತನ ಶ್ರೇಣಿ :

ಅ) ನಿರ್ವಾಹಕ ಅಧಿಕಾರಿ.—೧೯೦೨–೫೦–೨೩೦–೭೫–೨೫೦೦–೯೦–೩೩೫೦–೧೦೦–೩೬೯೦.

ಆ) ಮೊದಲನೇ ದರ್ಜೆ ಗುಮಾಸ್ತರು.—೧೧೯೦–೩೦–೧೪೦೦–೪೦–೧೪೦೦–೫೦–೨೬೦೦.

೨. ದೇವಸ್ಥಾನ ಹಂಗಾಮಿ ನೌಕರರ ವೇತನ ಶ್ರೇಣಿ

೧ನೇ ವರ್ಗ. ಪೇಷ್ಕಾರು, ಅಗಮೀಕರು.—೩೦೦–೧೫–೩೯೦–೨೦–೫೫೦+೧೦೦ ಹೆಚ್ಚುವರಿ ಭತ್ಯ.

೨ನೇ ವರ್ಗ.—ಅರ್ಚಕರು, ಅದ್ದಿಗದವರು, ನಗದೀ ಗುಮಾಸ್ತರು, ಬೊಕ್ಕಸದ ಶ್ಯಾನುಭೋಗರು, ದಿನಸೀಗುಮಾಸ್ತರು ಮಣಿಗಾರರು, ಪಾರುಪತ್ತೆಗಾರರು. | ೨೫೦–೧೦–೩೦೦–೧೫–೩೯೦–೨೦–೪೫೦+೭೫ ಹೆಚ್ಚುವರಿ ಭತ್ಯೆ.

೩ನೇ ವರ್ಗ.—ಅಡಿಗೆಯವರು, ಬಂಡೀಕಾರ, ತಳವಾರರು. ಗೊಲ್ಲರು ಎಲೆಕ್ಟ್ರೀಷಿಯನ್, ಕೋತಿಕಾಯುವವರು, ಅಟೆಂಡರ್, ತೋಟದ ಕೆಲಸದವರು, ಡೋಲು ನಾದಸ್ವರ, (ಹೊರಗಿನ ಒಳಗಿನ) ಚಂಗೂಲಿಯವರು. | ೧೫೦–೧೦–೨೩೦–೧೫–೩೬೦+೧೨೫ ಹೆಚ್ಚುವರಿ ಭತ್ಯ.

೪ನೇ ವರ್ಗ.—ಪರಿಚಾರಕರು, ಸಹಸ್ರನಾಮ ಜೋಯಿಸರು, ಶ್ರೀ ಪಾದದವರು, ಪಾರಾಯಣದವರು, ಪೂಜೆಯವರು, (ಗಣಪತಿ ಆಂಜನೇಯ) ಅಭಿಷೇಕದವರು, ಕಾವಲುಗಾರರು, | ೧೨೦–೧೦–೨೦೦+೫೦ ವಿಶೇಷ ಭತ್ಯ.

೫ನೇ ವರ್ಗ.—ಶೃತೀ, ತಾಳ, ಅಗಸ, ಜಾಡಮಾಲಿಗಳು. ಇತರೇ —೧೦೦–೧೦–೨೫೦+೫೦ ವಿಶೇಷ ಭತ್ಯೆ.

	ಆದಾಯ	೧೯೮೫–೮೬	೧೯೮೬–೮೭	೧೯೮೭–೮೮
೧.	ಗೋಲಕಗಳಿಂದ.—	೪,೨೯,೬೦೮–೦೦	೮,೮೪,೩೨೮–೦೦	೯,೧೪,೮೧೬–೦೦
೨.	ಸೇವಾರ್ಥಿಗಳಿಂದ.— (ಮನಿಆರ್ಡರ್ ಸೇರಿ)	೩,೯೬,೮೮೫–೦೦	೭,೫೧,೩೯೫–೦೦ (ವಿಶೇಷ ದರ್ಶನ ಸೇವಾ ಶುಲ್ಕ ೨,೯೬,೦೦೦ ರೂ. ಸೇರಿ)	೯,೮೬,೭೭೭–೦೦ (ವಿಶೇಷ ದರ್ಶನ ಸೇವಾ ಶುಲ್ಕ ೬,೦೦,೦೦೦ ರೂ. ಸೇರಿ)
೩.	ವಿವಿಧ ಆಂದರೆ, ಲಾಡು, ಕಲ್ಲುಸಕ್ಕರೆ, ಫೋಟೋ, ಪಾದರಕ್ಷೆ, ವಗೈರೆ ವಾರ್ಷಿಕ ಗುತ್ತಿಗೆ ಹೆಚ್ಚಿನ ಟೆಂಡರುಗಳಿಂದ	೬,೦೭,೮೭೨–೦೦	೬,೨೬,೪೮೪–೦೦	೯,೧೫,೮೮೨–೦೦
	ಒಟ್ಟು	೧೪,೨೪,೩೬೫–೮೦	೨೨,೬೨,೨೦೭–೦೦	೨೮,೧೭,೪೭೫–೦೦ ರೂ.

ಕೆ–ಹಿಂ. ಎ. ಎಂ.

ಶ್ರೀ ವೇದಾಂತ ಹೆಮ್ಮಿಗೆ —ಮಾನ್ಯ ಅಧ್ಯಕ್ಷರೇ, ಈ ಕಲ್ಲು ದೇವರ ಆದಾಯ ೧೯೮೫–೮೬ರಲ್ಲಿ ೧೪ ಲಕ್ಷ ರೂಪಾಯಿಗಳಿದ್ದರೆ ೧೯೮೭–೮೮ರಲ್ಲಿ ೨೮ ಲಕ್ಷಕ್ಕೆ ಏರಿಕೆಯಾಗಿದೆ. ಅಂದರೆ ಒಂದಕ್ಕೆ ಎರಡರಷ್ಟು ಹೆಚ್ಚಾಗಿದೆ. ಇಲ್ಲಿ ೯೩ ಜನ ಹಂಗಾಮಿ ನೌಕರರು ಕೆಲಸ ಮಾಡುತ್ತಿದ್ದಾರೆ. ನಾನು ಕಾರ್ಮಿಕ ಕ್ಷೇತ್ರದಲ್ಲಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದ್ದೇನೆ, ಆದ್ದರಿಂದ ಪೂರ್ಣಾವಧಿ ಹಂಗಾಮಿ ನೌಕರರು ಎಂದರೆ ಏನು ಎಂಬುದನ್ನು ತಿಳಿಸಬೇಕು ? ಇವರಿಗೆ ಏನಾದರೂ ಸರ್ವೀಸ್ ಕಂಡೀಷನ್ಸ್ ಇದೆಯೇ ? ಇವರುಗಳು ಕೆಲಸದಿಂದ ನಿವೃತ್ತಿಯಾದ ಮೇಲೆ ಏನಾದರೂ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕೆಂಬ ನಿಯಮ ಏನಾದರೂ ಇವರ ಸರ್ವೀಸ್ ಕಂಡೀಷನ್ಸ್‌ನಲ್ಲಿ ಇದೆಯೇ ? ಈಗ ೨೬ ಲಕ್ಷ ರೂಪಾಯಿಗಳ ಆದಾಯ ಏನು ಬರುತ್ತಿದೆ, ಅದರಲ್ಲಿ ಈ ೯೩ ಜನ ಹಂಗಾಮಿ ನೌಕರರಿಗೆಂದು ಎಷ್ಟು ಹಣ ಖರ್ಚು ಮಾಡುತ್ತಿದ್ದೀರಿ ? ಏಕೆಂದರೆ, ಸರ್ಕಾರ ಇಲ್ಲಿ ಒಂದು ಪೈಸೆಯಷ್ಟು ಸಹ ಬಂಡವಾಳವನ್ನು ಹೂಡಿಲ್ಲ. ಭಕ್ತರು ಈ ಕಲ್ಲು ದೇವರಿಗೆ ಕೊಡುವ ಕಾಣಿಕೆ ಹಣದಲ್ಲಿ ಈ ಬಡ ನೌಕರರಿಗೆ ಹೆಚ್ಚು ಸಂಬಳ ಕೊಡುವುದಕ್ಕೆ ಇಗೂವಂತಹ ಅಡ್ಡಿ ಆತಂಕಗಳು ಏನಿವೆ ? ಇರುವವರಿಗೆ ಇವರ ಸಂಬಳವನ್ನು ಏತಕ್ಕೆ ಹೆಚ್ಚು ಮಾಡಿಲ್ಲ.

ಶ್ರೀ ಕೆ. ಅಮರನಾಥ ಶೆಟ್ಟಿ. —ಈ ಪೂರ್ಣಾವಧಿ ಹಂಗಾಮಿ ನೌಕರರಿಗೆ ನಾವು ಪೆನ್‌ಷನ್ ಹಾಗೂ ಬೇರೆ ಯಾವುದೇ ಸವಲತ್ತುಗಳನ್ನು ಕೊಡುತ್ತಿಲ್ಲ, ಭಕ್ತರು ಈ ದೇವರಿಗೆ ಸಲ್ಲಿಸುತ್ತಿರುವ ಕಾಣಿಕೆ ಹಣ ಏನಿದೆ, ಈ ಹಣದಲ್ಲಿ ನಾವು ಭಕ್ತರ ಅನುಕೂಲಕ್ಕಾಗಿ ಕಲ್ಯಾಣ ಮಂಟಪ, ವಸತಿ ಸೌಲಭ್ಯ, ಸ್ನಾನ ಗೃಹಗಳ ಸೌಲಭ್ಯ, ಶೌಚಾಲಯಗಳ ಸೌಲಭ್ಯ, ವಿದ್ಯುತ್ ಸೌಲಭ್ಯ ಮುಂತಾದ ಅನುಕೂಲಗಳನ್ನು ಮಾಡಿಕೊಡಬೇಕೆಂದು ಒಂದು ಕೋಟಿ ರೂಪಾಯಿಗಳ ಒಂದು ಪ್ಲಾನನ್ನು ತಯಾರು ಮಾಡಿದ್ದೇವೆ. ಈ ನೌಕರರ ಸಂಬಳವನ್ನು ಏತಕ್ಕೆ ಹೆಚ್ಚು ಮಾಡಿಲ್ಲವೆಂದು ಮಾನ್ಯ ಸದಸ್ಯರು ಕೇಳಿದ್ದಾರೆ ? ಅಲ್ಲಿರುವ ಈ ಚಾಮುಂಡಿ ದೇವಸ್ಥಾನದಿಂದ ಬರುವಂತಹ ಆದಾಯದಲ್ಲಿ ನಾವು ೨೪ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ಇಲ್ಲಿ ಕೆಲಸ ಮಾಡುತ್ತಿರುವ ೯೫ ನೌಕರರು ಅಲ್ಲದೆ ಇತರೇ ೨೪ ಸಂಸ್ಥೆಗಳಲ್ಲಿ ನೂರು ಜನ ನೌಕರರು ಕೆಲಸ ಮಾಡುತ್ತಿದ್ದಾರೆ, ಈ ನೌಕರರಿಗೂ ಸಹ ಈಗ ಬರುತ್ತಿರುವ ಆದಾಯದ ಹಣದಲ್ಲಿಯೇ ಸಂಬಳ ಕೊಡಬೇಕಾಗಿದೆ. ಇಲ್ಲಿ ಕೆಲಸ ಮಾಡುತ್ತಿರುವ ನೌಕರ ವರ್ಗವನ್ನು ೫ ವರ್ಗಗಳನ್ನಾಗಿ ವಿಂಗಡಿಸಿ, ಅವರ ವೇತನವನ್ನು ೧-೪-೧೯೮೬ ರಿಂದ ಹೆಚ್ಚು ಮಾಡಿದ್ದೇವೆ. ಇದರ ಜೊತೆಗೆ ದಸರಾ ಉತ್ಸವ ಸಮಯದಲ್ಲಿ ಇವರಿಗೆ ವಿಶೇಷ ಭತ್ಯವನ್ನು ಕೊಡುತ್ತಿದ್ದೇವೆ. ಈ ಎಲ್ಲಾ ಕಾರಣಗಳಿಂದ ಇವರಿಗೆ ಈಗ ಹೆಚ್ಚು ಸಂಬಳ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಇಲ್ಲಿನ ನಿರ್ವಾಹಕ ಅಧಿಕಾರಿಗೆ ೩೬೫೦ ರೂಪಾಯಿಗಳ ಸಂಬಳ, ಮೊದಲನೇ ದರ್ಜೆಯ ಗುಮಾಸ್ತರಿಗೆ ೨೨೭೦ ರೂಪಾಯೀಗಳ ಸಂಬಳ ಕಳಿತು ತಿನ್ನುವವರಿಗೆ ಕೈತುಂಬಾ ಸಂಬಳ ಕೊಟ್ಟು ಕಷ್ಟಪಟ್ಟು ಕೆಲಸ ಮಾಡುವವರಿಗೆ ೨೫೦ ರೂಪಾಯಿಗಳ ಸಂಬಳ ಮತ್ತು ದಸರಾ ಸಮಯದಲ್ಲಿ ೫೦ ರೂಪಾಯಿಗಳ ಹೆಚ್ಚುವರಿ ಭತ್ಯ ಕೊಡುತ್ತಿರುವುದು ಯಾವ ನ್ಯಾಯ ? ಕಷ್ಟ ಬಂದಾಗ ವೆಂಕಟರಮಣ ನಮ್ಮನ್ನು ಕಾಯುತ್ತಾನೆ ಎಂದು ಹೇಳುವುದು ಉಂಟು. ಆದರೆ ಇಲ್ಲಿ ರಾತ್ರಿ ದೇವರನ್ನು ಕಾಯುವ ಕಾವಲುಗಾರನಿಗೆ ೩೫೦ ರೂಪಾಯಿಗಳ ಸಂಬಳ ಕೊಡುವುದು ಯಾವ ನೀತಿ ? ಇದರಲ್ಲಿ ಏನಾದರೂ ಮನುಷ್ಯತ್ವ ಇದೆಯೇ ? ಇಲ್ಲಿ ಮನುಷ್ಯ ದೇವರನ್ನು ಕಾಯುತ್ತಾನೆ. ಆದರೆ ಸಂಬಳ ಮಾತ್ರ ಕಡಿಮೆ. ಇಲ್ಲಿ ಬರುವ ಹಣದಿಂದ ಗೆಸ್ಟ್‌ಹೌಸ್ ಮತ್ತೊಂದು ಕಟ್ಟಿಸುವುದಾಗಿ ಹೇಳಿದಿರಿ. ಮೈಸೂರು ನಗರ ಇತ್ತೀಚೆಗೆ ತನ್ನ ಸೌಂದರ್ಯವನ್ನು ಕೀರ್ತಿಯನ್ನು ಕಳೆದುಕೊಳ್ಳುವ ಸಂಭವ ಬಂದಿದೆ. ಹೊದಲು ಈ ಬೆಟ್ಟಕ್ಕೆ ರೋಪ್–ವೇ ಹಾಕಬೇಕೆಂಬ ಯೋಚನೆ ಇತ್ತು. ಇದನ್ನು ಹಾಕುವುದರಿಂದ ಮೈಸೂರು ನಗರದ ಸೌಂದರ್ಯ ಹೆಚ್ಚುತ್ತದೆ ಮತ್ತು ಅಲ್ಲಿಗೆ ಬರುವ ಪ್ರವಾಸಿಗರಿಗೆ ಹೆಚ್ಚಿನ ಅನುಕೂಲ ಕಲ್ಪಿಸಿಕೊಟ್ಟಂತೆ ಆಗುತ್ತದೆ. ಇದನ್ನು ಹಾಕುವುದರಿಂದ ಮೈಸೂರಿಗೆ ಬರುವಂತಹ ಜನರನ್ನು ಆಕರ್ಷಣೆ ಮಾಡಿದಂತಾಗುತ್ತದೆ. ಆದ್ದರಿಂದ ಈ ಕೆಲಸ ಎಲ್ಲಿಯವರೆಗೆ ಬಂದಿದೆ ಮತ್ತು ಯಾವಾಗ ಇದನ್ನು ಪ್ರಾರಂಭ ಮಾಡುತ್ತೀರಿ ಎಂದು ತಿಳಿಸಬೇಕು ?

ಶ್ರೀ ಕೆ. ಅಮರನಾಥ ಶೆಟ್ಟಿ.—ರೋಪ್‌ವೇ ವಿಷಯದಲ್ಲಿ ಇದನ್ನು ನಾವು ಪರಿಶೀಲಿಸುತ್ತೇವೆ. ಈಗ ಉತ್ತರ ನನ್ನಲ್ಲಿಲ್ಲ, ನಂತರ ತರಿಸಿಕೊಡುತ್ತೇನೆ. ಮತ್ತು ನಿರ್ವಾಹಕರು ಹಾಗೂ ಮೊದಲನೇ ದರ್ಜೆ ಗುಮಾಸ್ತರ ಸಂಬಳದ ವಿಷಯವನ್ನು ಹೇಳಿದ್ದಾರೆ, ಅವರಿಗೆ ಸರ್ಕಾರಿ ನೌಕರರಿಗೆ ಕೊಡುವಂಥ ಸಂಬಳವನ್ನು ಕೊಟ್ಟಿದ್ದಾರೆ. ಆದು ದೇವಸ್ಥಾನದ ಆದಾಯದಿಂದ ಕೊಡುವಂಥ ಸಂಬಳವಲ್ಲ.